## 2 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ
## ಸಿ ಸಿ ನಂ. 2706/2022

| | | |
|---|---|---|
| ಹೆಸರು | ರತ್ನಾಬಾಯಿ | PW -5 |
| ಗಂಡನ ಹೆಸರು | ಯುವರಾಜ ನಾಯ್ಕ | CW -6 |
| ವಯಸ್ಸು | 40 ವರ್ಷ | |
| ಉದ್ಯೋಗ | ಕೂಲಿ | ದಿನಾಂಕಃ 24.10.2024 |
| ವಾಸ | ರುದ್ರಾಪುರ ಗ್ರಾಮ ಸೇವಾನಗರ, | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ ಸಸಅ ರವರಿಂದ ಃ**

ಚಾಸಾ 1 ನನ್ನ ಮಗಳು. ಚಾಸಾ 7 ನನ್ನ ಮಗ. ಚಾಸಾ 8 ನನ್ನ ಗಂಡ. ಚಾಸಾ 9 ಮತ್ತು 10 ರವರ ಪರಿಚಯ ಇದೆ. 1 ನೇ ಆರೋಪಿ ನನ್ನ ಅಳಿಯ. 2 ರಿಂದ 6 ನೇ ಆರೋಪಿತರು ನಮ್ಮ ಚಾಸಾ 1 ರವರ ಗಂಡನ ಮನೆಯವರು.

ಸನ್ 2015 ರಲ್ಲಿ ಚಾಸಾ 1 ಮತ್ತು 1 ನೇ ಆರೋಪಿಯ ವಿವಾಹ ಮಾಡಿಕೊಟ್ಟಿದ್ದು, 3-4 ವರ್ಷಗಳ ಕಾಲ ಅವರು ಚೆನ್ನಾಗಿ ಇದ್ದರು. ಮದುವೆ ಕಾಲಕ್ಕೆ ರೂ.6.00 ಲಕ್ಷ ಹಣ, ಎರಡೂವರೆ ತೊಲೆ ಬಂಗಾರದ ಒಡವೆಗಳು ಕೊಟ್ಟು ಮದುವೆ ಮಾಡಿರುತ್ತೇವೆ. ನಂತರ ಆರೋಪಿತರು ಚಾಸಾ 1 ರವರಿಗೆ ನಿನ್ನ ತವರು ಮನೆಯಿಂದ ವರದಕ್ಷಿಣೆ ತೆಗೆದುಕೊಂಡು ಬರುವಂತೆ ಹೊಡೆಯುವುದು ಬಡಿಯುದು ಮಾಡುತ್ತಿದ್ದರು. 1 ನೇ ಆರೋಪಿಯು ಚಾಸಾ 1 ರವರ ಕೈ ಮುರಿದಿದ್ದು, ಮತ್ತೊಂದು ಸಲ ಕಾಲಿ ಹೊಡೆದು ಗಾಯ ಪಡಿಸಿರುತ್ತಾನೆ. ನಂತರ ಚಾಸಾ 1 ರವರು ನನ್ನ ಮನೆಗೆ ಬಂದಾಗ 1 ನೇ ಆರೋಪಿಯು ಅಲ್ಲಿಯೂ ಬಂದು ಚಾಸಾ 1 ರವರಿಗೆ ಹೊಡೆಯುವುದು ಬಡಿಯುವುದು ಮಾಡಿರುತ್ತಾನೆ. ನಂತರ 1 ನೇ ಆರೋಪಿಯು ಅಂಜಲಿ ಎನ್ನುವ ಮಹಿಳೆಯನ್ನು ಕರೆದುಕೊಂಡು ಬಂದು ತನ್ನ ಮನೆಯಲ್ಲಿ ಇಟ್ಟುಕೊಂಡಿದ್ದನು, ಅದಕ್ಕೆ ಉಳಿದ ಆರೋಪಿತರು ಸಹ ಕುಮ್ಮಕ್ಕು ನೀಡಿರುತ್ತಾರೆ. ನಂತರ ಚಾಸಾ 1 ರವರನ್ನು ಮನೆಯಿಂದ ಹೊರೆಗೆ ಹಾಕಿರುತ್ತಾರೆ. ನಂತರ ಚಾಸಾ 1 ರವರು ಆರೋಪಿತರ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ.

(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಸಲು ಮಾನ್ಯ ಎ.ಪಿ.ಪಿ ಯವರು ಕೋರಿದ್ದು, ಸಂಗತಿಗಳನ್ನು ಪರೀಶಿಲಿಸಲಾಗಿ ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟಿ ಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲು ಶ್ರೀ ಎ.ಪಿ.ಪಿ. ಯವರಿಂದಃ**

1 ನೇ ಆರೋಪಿಯು ಚಾಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಾಡಿ, ಮಾನಸಿಕ ಮತ್ತು ದೈಹಿಕ ಹಿಂಸೆ ನೀಡುತ್ತಿದ್ದರು ಎಂದರೆ ಸರಿ. ನಂತರ ದಿನಾಂಕ 14.03.2022 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಚಾಸಾ 1 ರವರು ನಮ್ಮ ಮನೆಗೆ ಬಂದಾಗ 1 ನೇ ಆರೋಪಿಯು 6 ನೇ ಆರೋಪಿಯ ಕುಮ್ಮಕ್ಕಿನಿಂದ, ತನಗೆ ಬೈದಾಡಿ, ಕೈಗಳಿಂದ ಮೈಕೈಗೆ ಹೊಡೆದು, ನೀನು ತವರು ಮನೆಗೆ ಹೋಗಿ ವರದಕ್ಷಿಣೆ ತರದಿದ್ದರೆ ಜೀವಂತವಾಗಿ ಇರಲು ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿ ಹಿಂಸೆ ನೀಡಿರುತ್ತಾನೆ ಎಂದು ತಿಳಿಸಿದಳು ಎಂದರೆ ಸರಿ. ನಂತರ ದಿನಾಂಕ 15.03.2022 ರಂದು ಸಂಜೆ 5.00 ಗಂಟೆ ಸಮಯದಲ್ಲಿ 1 ನೇ ಆರೋಪಿಯು ನಮ್ಮ ಮನೆಗೆ ಬಂದು ಚಾಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ವರದಕ್ಷಿಣೆ ತಗೊಂಡು ಬಾ ಅಂದರೆ ಇಲ್ಲೇ ಇದ್ದೀಯ

ಅಂತಾ ಹೇಳಿ ಕೈಗಳಿಂದ ಮೈ ಕೈ ಗೆ ಹೊಡೆದು ಗಲಾಟೆ ಮಾಡಿದರು ಎಂದರೆ ಸರಿ. ನಂತರ ಚಾಸಾ 9 ಮತ್ತು 10 ರವರು ಸದರಿ ಗಲಾಟೆಯನ್ನು ಬಿಡಿಸಿದರು ಎಂದರೆ ಸರಿ.

**ಪಾಟೀ ಸವಾಲುಃ** ಆರೋಪಿರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಯಾವುದೇ ಸಕಾರಣಗಳು ಇಲ್ಲದೇ ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಇಲ್ಲಃ**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

Sd/-

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಮ್ಎಫ್ ಸಿ ನ್ಯಾಯಾಲಯ,ಹರಿಹರ.